<u>ನ್ಯಾಯಾಲಯದ ಆದೇಶದ ಮೇರೆಗೆ ದಿನಾಂಕಃ **25.01.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ **16** ನೇ ಪರ ಶ್ರೀ ಪಿ ಎಸ್ ವಕೀಲರಿಂದಃ</u>

ದಾವಾ ಸ್ವತ್ತಿನಲ್ಲಿ ಹಲವಾರು ಕ್ರಯ ಪತ್ರಗಳು ಆಗಿವೆ ಎಂದರೆ ಇಲ್ಲ. ನರಸಿಂಹಯ್ಯ ರವರು ಹಲವಾರು ಸೈಟ್ ಗಳನ್ನು ಕ್ರಯದ ಮೊಬಲಗೂ ಪಡೆದುಕೊಂಡು ನೊಂದಣಿ ಮಾಡಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಜಂಟಿಯಾಗಿ ಇದ್ದ ಕಾರಣ ಅವರು ಒಬ್ಬರೆ ಕ್ರಯ ಮಾಡಲು ಬರುವುದಿಲ್ಲ. ಕ್ರಯ ಪತ್ರವನ್ನು ದಿಃ04.02.1981 ಖರೀದಿಮಾಡಲು ಚಿಕ್ಕಲಿಂಗಪ್ಪರವರು ಚೆಕ್ ಮುಖಾಂತರವಾಗಲಿ ಅಥವಾ ಡಿಡಿ ಮುಖಾಂತರವಾಗಲಿ ಹಣ ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಗದು ರೂಪದಲ್ಲಿ ನೀಡಿದ್ದಾರೆ. ನಗದು ರೂಪದಲ್ಲಿ ಎಷ್ಟು ಹಣವನ್ನು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನೀವು ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಪ್ರತಿವಾದಿ 16 ಜಗನ್ನಾಥ ರವರು ಸೈಟ್ ನಂಬರ 23 ರಿಂದ 26, 61 ರಿಂದ 64, 65 ರಿಂದ 72 ರ ಮಾಲೀಕರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಕರಾರುಗಳಾಗಿವೆ ಎಂದು ಹೇಳುತ್ತಾರೆ ಜಂಟಿಯಾಗಿರುವುದರಿಂದ ಕರಾರು ಮಾಡಿ ಕೊಡಲಿಕ್ಕೆ ಬರುವುದಿಲ್ಲ. ನರಸಿಂಹಯ್ಯರವರ ವಿಲ್ ನ್ನು ಕೈಬರಹದಲ್ಲೆ ಬರೆದಿದ್ದಾರೆ ಎಂದರೆ ವಿಲ್ ಬರೆದಿದ್ದಾರೆ ಎಂದು ಗೊತ್ತು ಅದರ ಅಂಶಗಳು ನನಗೆ ಗೊತ್ತಿಲ್ಲ. ನರಸಿಂಹಯ್ಯರವರ ಸಹಿಯನ್ನು ಗುರುತಿಸಬಹುದೆ ಎಂದರೆ ಹೌದು ಸಾಕ್ಷಿಗೆ 16 ನೆ ಪ್ರತಿವಾದಿಯ ವಕೀಲರು ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ನರಸಿಂಹಯ್ಯರವರ ಸಹಿ ಮತ್ತು ಅವರ ಭಾವ ಚಿತ್ರ ಇದೆ ಎಂದು

ಕೇಳಲಾಗಿ ಒಪ್ಪಿದ ಮೇರೆಗೆ ನರಸಿಂಹಯ್ಯರವರ ಎರಡು ಭಾವ ಚಿತ್ರಗಳು ಮತ್ತು 2 ಸಹಿಗಳನ್ನು ನಿಡಿ-**5** ಎಂದು ಗುರುತಿಸಲಾಯಿತು. ನಿಡಿ-5 ಪುಟ ಇರುವ ದಾಖಲೆಯನ್ನು ಸಾಕ್ಷಿಗೆ ತೋರಿಸಿ ಅದರಲ್ಲಿರುವ ಅಕ್ಷರ ನರಸಿಂಹಯ್ಯರವರ ಕೈ ಬರಹ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನೀವು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರಲ್ಲ ಎಂದರೆ ಸರಿ. ಪ್ರತಿವಾದಿ 1 ಮತ್ತು 16 ರವರು ದಾವಾ ಶೆಡ್ಯೂಲ್ ಐಟಂ ನಂಬರ 1,6 ಮತ್ತು 7 ರ ಮಾಲೀಕರಾಗಿದ್ದರು ಎಂದರೆ ಸರಿಯಲ್ಲ. ನರಸಿಂಹಯ್ಯರವರು ಅನುಮೋದಿತ ಲೆ ಔಟ ಪ್ಲ್ಯಾನ್ ಮಾಡಿದ್ದರು ಎಂದರೆ ಒಟ್ಟಿಗೆ ಸೇರಿ ಮಾಡಿದ್ದರು. ಲೇ ಔಟ್ ಮಾಡಿ ಅವರು ಮಾರಿದ್ದರು ಪ್ರಸ್ತುತ ಈಗ ಕ್ರಯಕ್ಕೆ ಪಡೆದವರು ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಿಮಗೆ ದಾವಾ ಶೆಡ್ಯೂಲ್ ಐಟಂ ನಂಬರ 1,6 ಮತ್ತು 7 ರಲ್ಲಿ ಯಾವುದೆ ಹಕ್ಕಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ಅವರ ಪ್ರತಿವಾದ ಪತ್ರ / ತಕರಾರಿನಲ್ಲಿ 16 ನೆ ಪ್ರತಿವಾದಿ ದಾವಾ ಶೆಡ್ಯೂಲ್ ಐಟಂ ನಂಬರ 1,6 ಮತ್ತು 7 ರ ಮಾಲೀಕರು ಎಂದು ಹೇಳಿದ್ದಾರೆ ಎಂದರೆ ಮಾಲೀಕರು ಎಂದು ಹೇಳಿಲ್ಲ ಕ್ರಯದ ಕರಾರು ಮಾಡಿಕೊಟ್ಟಿದೇನೆ ಎಂದು ಹೇಳಿದ್ದಾರೆ. ನರಸಿಂಹಯ್ಯರವರು ಅವರ ವಿಲ್ ಮುಖಾಂತರ 16 ನೆ ಪ್ರತಿವಾದಿಗೆ ದಾವಾ ಶೆಡ್ಯೂಲ್ ಐಟಂ ನಂಬರ 1,6 ಮತ್ತು 7 ನ್ನು ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಚಿಕ್ಕಲಿಂಗಪ್ಪರವರು ದಿಃ04.02.1981 ಕ್ರಯ ಪತ್ರದ ಯಾವುದೇ ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ.

OS:7084/1997 ದಾವೆಯನ್ನು ಹಿಂದೆ ವಿಭಾಗಕ್ಕಾಗಿ ಸಲ್ಲಿಸಿದ್ದೀರಿ ಎಂದರೆ ಅದರಲ್ಲಿ ದಾವಾ ಸ್ವತ್ತಿನ ಶೆಡ್ಯೂಲ್ ಬೇರೆ ಇತ್ತು ಉಳಿಕೆ ಜಂಟಿಯಾಗಿದ್ದ ಸ್ವತ್ತುಗಳಿಗೆ ಪ್ರಸ್ತುತ ಈ ದಾವೆಯನ್ನು ಸಲ್ಲಿಸಿದ್ದೇನೆ. OS:7084/1997 ದಾವೆಯ ಸರ್ವೆ ನಂಬರ ಒಂದೆ ಆಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು 3 ಸರ್ವೆ ನಂಬರಗಳಿಗೆ ದಾವೆಯನ್ನು ಸಲ್ಲಿಸಿದ್ದೆ 2 ಸರ್ವೆ ನಂಬರಗಳಿಗೆ ರಾಜಿ ಯಾಗಿತ್ತು

ಒಂದು ಸರ್ವೆ ನಂಬರ 56/2 ಉಳಿದಿತ್ತು. ಪ್ರಸ್ತುತ ಈ ದಾವಾ ಸ್ವತ್ತನ್ನು ಯಾವ ಕಾರಣಕ್ಕೆ OS:7084/1997 ರಲ್ಲಿ ಸೇರಿಸಿರಲಿಲ್ಲ ಎಂದರೆ ಜಂಟಿಯಾಗಿ ಅಭಿವೃದ್ಧಿ ಪಡಿಸಲು ಹಾಗೆ ಉಳಿಸಿಕೊಂಡಿದ್ದೇವು. ನಿಡಿ-1 ಪ್ರಕರಣಕ್ಕಾಗಿ ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ನಿಡಿ-2 ರಲ್ಲಿರುವ ರಿಟ್ ಅರ್ಜಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಏನಾಗಿತ್ತು ಎಂದರೆ ಇನ್ನೂ ಬಾಕಿ ಇದೆ. ನಿಪಿ-2 ನ್ನು ನರಸಿಂಹಯ್ಯರವರು ಮಾಡಿಸಿದ್ದ ಪರಿವರ್ತನೆ ಆದೇಶ ಎಂದರೆ ಇಬ್ಬರೂ ಸೇರಿ ಮಾಡಿಸಿದ್ದು. ನಿಪಿ-4 ರ ಆದೇಶ ಪ್ರತಿಯಲ್ಲಿ ಅದೆ ವ್ಯಾಜ್ಯ ಕಾರಣದ ಮೇಲೆ ಹೊಸ ದಾವೆಯನ್ನು ಹೂಡಲು ಅನುಮತಿಸಿರಲ್ಲಿಲ್ಲ ಎಂದರೆ ಸರಿ. ನಿಪಿ-5 ರಲ್ಲಿ ನರಸಿಂಹ ಯ್ಯರವರು ಪವರ ಆಫ್ ಆರ್ಟಾನಿ ಹೊಲ್ಡರ್ ಒಪ್ಪಿಕೊಂಡಿದ್ದರು ಎಂದರೆ ಇಲ್ಲ. ನಿಪಿ-6 ನರಸಿಂಹಯ್ಯರವರಿಗೆ ತಲುಪಿಲ್ಲ ಎಂದರೆ ಸರಿಯಲ್ಲ. ಅದರ ಸ್ವೀಕೃತಿ ಪ್ರತಿಯನ್ನು ನೀವು ಹಾಜರು ಪಡಿಸಿಲ್ಲ ಎಂದರೆ ಹೌದು. ನಿಪಿ-7 ರ ವಿಭಾಗ ಪತ್ರದ ಪ್ರಕಾಶ ದಾವಾ ಸ್ವತ್ತಿನ ಶೆಡ್ಯೂಲ್ ಡಿ ನರಸಿಂಹಯ್ಯರವರಿಗೆ ಹೋಗಿತ್ತು ಎಂದರೆ ಸರಿಯಲ್ಲ. ಜಂಟಿಯಾಗಿ ನರಸಿಂಹಯ್ಯ, ಶಶಿಕಲಾ ಮತ್ತು ಭಾಗ್ಯಮ್ಮ ರವರ ಹೆಸರಿಗೆ ಹೋಗಿತ್ತು. ನಿಪಿ-9 ರ ಮಾಲೀಕರ ಕಾಲಂ ನಲ್ಲಿ ನರಸಿಂಹಯ್ಯರವರ ಹೆಸರಿದೆ ಎಂದರೆ ಇಬ್ಬರ ಹೆಸರೂ ಇದೆ ಒಂದು ಚಿಕ್ಕಲಿಂಗಪ್ಪ ಮತ್ತು ಇನ್ನೊಂದು ನರಸಿಂಹಯ್ಯ. ದಾವಾ ಶೆಡ್ಯೂಲ್ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಅಲ್ಲ. ಈ ದಿನಕ್ಕೆ ದಾವಾ ಶೆಡ್ಯೂಲ್ ಸ್ವತ್ತುಗಳು ಎಷ್ಟು ಬೆಲೆ ಬಾಳುತ್ತವೆ ಎಂದರೆ ಗೊತ್ತಿಲ್ಲ. ಪ್ರಸ್ತುತ ಈಗ ಇರುವ ಖರೀದಿದಾರರುಗಳನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡದೆ ಸುಳ್ಳು ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನೀವು ದಾವಾ ಶೆಡ್ಯೂಲ್ 167 ರ ಸ್ವಾಧೀನದಲ್ಲಿ ಇದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು

ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**(ನಿಶಾ ರಾಣಿ ಎ. ಸಿ)**
**III ನೇ ಎ.ಸಿ.ಸಿ & ಎಸ್.ಜೆ,**
ಬೆಂಗಳೂರು.